ಸುದ್ದಿ ಸಿಂಚನ

ಕಾಯಿನ್ ಡಿಸಿಎಕ್ಸ್, ಡೆಲ್ಟಾ ಎಕ್ಸ್‌ಚೇಂಜ್ ಕಚೇರಿ ಮೇಲೆ ಇ.ಡಿ. ದಾಳಿ

ಬೆಂಗಳೂರು: ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ(ಫೇಮಾ) ಉಲ್ಲಂಘನೆ ಆರೋಪದಡಿ ದೇಶದ ಪ್ರಮುಖ ಕ್ರಿಪ್ಟೋ ಕರೆನ್ಸಿ ವಿನಿಮಯ ಕೇಂದ್ರವಾದ 'ಕಾಯಿನ್ ಡಿಸಿಎಕ್ಸ್' ಮತ್ತು 'ಡೆಲ್ಟಾ ಎಕ್ಸ್‌ಚೇಂಜ್'ಗೆ ಸಂಬಂಧಿಸಿದ ಬೆಂಗಳೂರಿನ 3 ಸ್ಥಳಗಳ ಮೇಲೆ ಬೆಂಗಳೂರು ವಲಯದ ಜಾರಿ ನಿರ್ದೇಶನಾಲಯ (ಇ.ಡಿ.) ಅಧಿಕಾರಿಗಳು ದಾಳಿ ನಡೆಸಿ ಶೋಧಿಸಿದ್ದಾರೆ.

ನೆಬ್ಲಿಯೊ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ 'ಕಾಯಿನ್ ಡಿಸಿಎಕ್ಸ್' ಮತ್ತು ಎಕ್ಸೇಲಿಯಮ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ 'ಡೆಲ್ಟಾ ಎಕ್ಸ್‌ಚೇಂಜ್' ಹೆಸರಿನಲ್ಲಿ ನಿರ್ವಹಿಸುತ್ತಿವೆ. ಈ ಕಂಪನಿಗಳು ದೊಡ್ಡ ಪ್ರಮಾಣದಲ್ಲಿ ಫೇಮಾ ಕಾಯ್ದೆ ಉಲ್ಲಂಘಿಸಿರುವ ಆರೋಪದ ಮಾಹಿತಿ ಮೇರೆಗೆ ಇ.ಡಿ. ತನಿಖೆ ಭಾಗವಾಗಿ ನ.4 ಮತ್ತು 5ರಂದು ಬೆಂಗಳೂರಿನ ಮೂರು ಸ್ಥಳಗಳ ಮೇಲೆ ದಾಳಿ ನಡೆಸಿ ಶೋಧಿಸಿದೆ. ಈ 'ಕಾಯಿನ್ ಡಿಸಿಎಕ್ಸ್' ಮತ್ತು 'ಡೆಲ್ಟಾ ಎಕ್ಸ್‌ಚೇಂಜ್' ವೇದಿಕೆಗಳು ಫ್ಯೂಚರ್ಸ್ ಮತ್ತು ಆಪ್ಷನ್‌ಗಳು ಮತ್ತು ರಿಯಲ್ ವರ್ಲ್ಡ್ ಅಸೆಟ್(ಆರ್‌ಡಬ್ಲ್ಯುಎ) ಟೋಕನ್‌ಗಳಲ್ಲಿ ವ್ಯಾಪಾರದ ಉತ್ಪನ್ನಗಳನ್ನು ನೀಡುತ್ತಿದ್ದವು. ವಿದೇಶಿ ಘಟಕಗಳ ಟೋಕನ್ ರೂಪದ ಸ್ಟಾಕ್‌ಗಳಲ್ಲಿ ವ್ಯಾಪಾರ ಮಾಡುವ ಅಧಿಕಾರ ಇಲ್ಲದಿದ್ದರೂ ಬಹಿರಂಗವಾಗಿ ಜಾಹೀರಾತು ನೀಡುತ್ತಿದ್ದವು. ಯುಎಸ್‌ಡಿಟಿ ಅಂತಹ ಸ್ಥಿರ ಕಾಯಿನ್ ಬಳಸಿಕೊಂಡು ವಿದೇಶಿ ಆಧಾರಿತ ವಿವಿಧ ಕ್ರಿಪ್ಟೋ ಟ್ರೇಡಿಂಗ್ ಪ್ಲಾಟ್‌ಫಾರ್ಮ್‌ಗಳಲ್ಲಿ ಉತ್ಪನ್ನ ವ್ಯಾಪಾರ ಮತ್ತು ಬಿಟ್ ಕಾಯಿನ್ ರೂಪದಲ್ಲಿ ಸ್ಟಾಕ್ ವ್ಯಾಪಾರ ಮಾಡುತ್ತಿರುವುದು ತನಿಖೆಯಲ್ಲಿ ಬಹಿರಂಗವಾಗಿದೆ. ವಿದೇಶಿ ಕ್ರಿಪ್ಟೋ ಟ್ರೇಡಿಂಗ್ ವೇದಿಕೆ ಗಳಲ್ಲಿ ಕೋಸ್ಟಾರಿಕಾ ಮೂಲದ ಸಂಸ್ಥೆಯೊಂದರ ಹೆಸರಿನಲ್ಲಿ ನಕಲಿ ಖಾತೆಯನ್ನು ತೆರೆಯಲಾಗಿದೆ. ವಾಸ್ತವದಲ್ಲಿ ಈ ಸಂಸ್ಥೆ ಅಸ್ತಿತ್ವದಲ್ಲಿಲ್ಲ. ಈ ವಹಿವಾಟುಗಳನ್ನು ನೇರವಾಗಿ ಕಾಯಿನ್ ಡಿಇಎಕ್ಸ್‌ನ ಎಪಿಐಎಸ್ ಮೂಲಕ ನಡೆಸಲಾಗುತ್ತಿದೆ. ಇಂತಹ ಗಡಿಯಾಚೆಗಿನ ಸ್ಪಾಟ್ ಟ್ರೇಡಿಂಗ್ ವಹಿವಾಟುಗಳ ಮೊತ್ತ ಸಾವಿರಾರು ಕೋಟಿ ರು.ಗಳಷ್ಟಿದೆ ಎಂಬುದು ತಿಳಿದು ಬಂದಿದೆ ಎಂದು ಇ.ಡಿ. ತಿಳಿಸಿದೆ.

ಆನ್ಲೈನ್ ಹಾವಳಿ ವ್ಯಾಪಾರಿಗಳಿಗೆ ಠುಸ್ ಪಟಾಕಿ

ಪ್ರತಿವರ್ಷ ₹8–10 ಲಕ್ಷವರೆಗೆ ವಹಿವಾಟು | ಈ ಸಲ 15% ನಷ್ಟ | ಆನ್ ಲೈನ್‌ನಲ್ಲಿ ಪಟಾಕಿ ಖರೀದಿಯಿಂದ ವ್ಯಾಪಾರಕ್ಕೆ ಹೊಡೆತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಗ್ರಾಹಕರು ಆನ್ ಲೈನ್‌ನಲ್ಲಿ ಪಟಾಕಿ ಖರೀದಿಸುತ್ತಿರುವುದರಿಂದ ಮಳಿಗೆ ತೆರೆದು ವ್ಯಾಪಾರ ಮಾಡುತ್ತಿರುವ ವ್ಯಾಪಾರಿಗಳಿಗೆ ಈ ಬಾರಿ ಶೇ.10–15ರಷ್ಟು ನಷ್ಟ ಉಂಟಾಗಿದೆ. ನಗರದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆಟದ ಮೈದಾನಗಳಲ್ಲಿ ಅಧಿಕೃತವಾಗಿ ಮಳಿಗೆ ತೆರೆದು ಮಾರಾಟ ಮಾಡುತ್ತಿರುವ ನಗರದ ಸುಮಾರು 380 ರಿಂದ 423 ವ್ಯಾಪಾರಿಗಳು ಪ್ರತಿವರ್ಷ 8 ರಿಂದ 10 ಲಕ್ಷ ರು.ವರೆಗೆ ವಹಿವಾಟು ನಡೆಸುತ್ತಾರೆ. ಆದರೆ, ಈ ಬಾರಿ ಆನ್ ಲೈನ್‌ನಲ್ಲಿ ಗ್ರಾಹಕರು ಹೆಚ್ಚಿನ ಪ್ರಮಾಣದಲ್ಲಿ ಪಟಾಕಿ ಖರೀದಿಸುತ್ತಿರುವುದರಿಂದ ವ್ಯಾಪಾರಕ್ಕೆ ಹೊಡೆತ ಬಿದ್ದಿದೆ ಎಂದು ವಿಶಾಲ ಕರ್ನಾಟಕ ಪಟಾಕಿ ವರ್ತಕರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಕೇಶವ ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್ 2018ರಲ್ಲಿಯೇ ಪಟಾಕಿಯನ್ನು ಆನ್ ಲೈನ್‌ನಲ್ಲಿ ಖರೀದಿಸಬಾರದು ಎಂದು ನಿಷೇಧ ಹೇರಿದೆ. ಆದರೂ ಕೆಲ ಕಂಪನಿಗಳು ಅಧಿಕೃತವಾಗಿಯೇ ಪಟಾಕಿ ಮಾರಾಟ ಮಾಡುತ್ತಿವೆ. ಜನರೂ ಕೂಡ ಸುಲಭವಾಗಿ ತಮಗೆ ಇಷ್ಟ ಬಂದ ಪಟಾಕಿಗಳನ್ನು ಖರೀದಿಸುತ್ತಿದ್ದಾರೆ. ಇದರಿಂದಾಗಿ ನಮಗೆ ಶೇ.10–15ರಷ್ಟು ಪ್ರಮಾಣದ ವ್ಯಾಪಾರ ನಷ್ಟವಾಗಿದೆ ಎಂದರು. ಮುಂದಿನ ವರ್ಷದಿಂದ ಇಂತಹ ಆನ್‌ಲೈನ್ ವ್ಯಾಪಾರಕ್ಕೆ ಕಡಿವಾಣ ಹಾಕುತ್ತೇವೆ. ಇದಕ್ಕೆ ಸಂಘಟನೆಯಿಂದ ಹೋರಾಟ ನಡೆಸಲಾಗುವುದು. ನಗರದಲ್ಲಿರುವ ಪಾಲಿಕೆಗೆ ಸೇರಿದ ಎಲ್ಲ ಆಟದ ಮೈದಾನಗಳಲ್ಲಿ ನಮ್ಮ ಸದಸ್ಯರ 380 ರಿಂದ 423 ಮಳಿಗೆಗಳಲ್ಲಿ ವ್ಯಾಪಾರ ನಡೆದಿದೆ. ವ್ಯಾಪಾರ ಯಾವುದೇ ತೊಂದರೆ ಇಲ್ಲದೆ ಸಾಗಿದೆ ಎಂದರು.


ಮಳೆಯಿಂದ ತೊಂದರೆ ಇಲ್ಲ ಮಳೆಯಿಂದಾಗಿ ಗ್ರಾಹಕರ ಕೊರತೆಯೇನೂ ಇಲ್ಲ. ಪ್ರತಿ ವರ್ಷದಂತೆ ಈ ವರ್ಷವೂ ಪಟಾಕಿ ಕ್ರೇಜ್ ಹೆಚ್ಚಾಗಿಯೇ ಇದೆ. ಮಾರಾಟ ಮಳಿಗೆಗಳಲ್ಲಿ ಪಟಾಕಿಯಿಂದ ಉಂಟಾಗುವ ಅನಾಹುತಗಳ ಬಗ್ಗೆ ಪೋಸ್ಟರ್‌ಮತ್ತು ಬ್ಯಾನರ್‌ಗಳನ್ನು ಹಾಕಿದ್ದೇವೆ. ಕೆಲ ಅಂಗಡಿಗಳಲ್ಲಿ ರಕ್ಷಣಾ ಕನ್ನಡಕಗಳನ್ನೂ ಮಾರಾಟ ಮಾಡುತ್ತಿದ್ದಾರೆ. ಆದರೆ, ಕೆಲವು ಅಂಗಡಿಗಳಲ್ಲಿ ಮಾರಾಟ ಮಾಡುತ್ತಿಲ್ಲ. ಮುಂದಿನ ವರ್ಷದಿಂದ ಪಟಾಕಿ ಸಿಡಿಸುವವರೂ, ನೋಡುವವರಿಗೂ ಕಡ್ಡಾಯವಾಗಿ ಕನ್ನಡಕ ಮಾರಾಟ ಮಾಡುತ್ತೇವೆ.

ಪರಿಸರಕ್ಕೆ ಹಾನಿಯಾಗದಂತೆ ಹಸಿರು ಪಟಾಕಿಗಳನ್ನೇ ಮಾರಾಟ ಮಾಡುತ್ತಿದ್ದೇವೆ ಎಂದು ಕೇಶವ ತಿಳಿಸಿದರು. ದೀಪಾವಳಿ ಹಬ್ಬದ ಪ್ರಯುಕ್ತ ನಾಲ್ಕು ದಿನಗಳು ವ್ಯಾಪಾರ ನಡೆಯುತ್ತದೆ. ಈ ವರ್ಷ ಶನಿವಾರ, ಭಾನುವಾರ, ಸೋಮವಾರ, ಮಂಗಳವಾರ ವ್ಯಾಪಾರ ಹೆಚ್ಚಿರುತ್ತದೆ. ಬುಧವಾರ ಮಧ್ಯಾಹ್ನದವರೆಗೆ ಮಳಿಗೆ ಇರುತ್ತದೆ. ನಂತರ ತೆರವುಗೊಳಿಸುತ್ತೇವೆ. ಪಾಲಿಕೆ ಮತ್ತು ಪೊಲೀಸರಿಂದ ಅನುಮತಿ ಸಿಕ್ಕಿರುವುದು ಕೇವಲ4 ದಿನಕ್ಕೆ ಮಾತ್ರ. 4 ದಿನಗಳಲ್ಲಿ ಒಂದೊಂದು ಮಳಿಗೆಯವರು 8 -10 ಲಕ್ಷ ರು.ವ್ಯಾಪಾರ ಮಾಡುತ್ತೇವೆ ಎಂದು ಕೇಶವ ವಿವರಿಸಿದರು.



ದೀಪಾವಳಿ ಹಬ್ಬದ ಅಂಗವಾಗಿ ರಾಜಧಾನಿಯಲ್ಲಿ ಪಟಾಕಿ ಖರೀದಿಸಲು ಮುಗಿಬಿದ್ದ ಚಿಣ್ಣರು ಮತ್ತು ಪೋಷಕರು.

ದೀಪಾವಳಿಗೂ ಮೊದಲೇ ಬಿಜಿಲಿ ಪಟಾಕಿಯಿಂದ ಬಾಲಕನಿಗೆ ಗಾಯ



ಬೇರೊಬ್ಬರು ಸಿಡಿಸುತ್ತಿದ್ದ ಪಟಾಕಿಯಿಂದ ಕಣ್ಣಿಗೆ ಹಾನಿ

ಬೆಂಗಳೂರು: ಬೆಳಕಿನ ಹಬ್ಬ ದೀಪಾವಳಿಗೂ ಮೊದಲೇ ಬೆಂಗಳೂರಿನಲ್ಲಿ 6 ವರ್ಷದ ಬಾಲಕನ ಕಣ್ಣಿಗೆ ಪಟಾಕಿ ಸಿಡಿದು ಗಾಯವಾಗಿದ್ದು, ಅದೃಷ್ಟವಶಾತ್ ಯಾವುದೇ ಕಣ್ಣಿಗೆ ಯಾವುದೇ ಹಾನಿ ಉಂಟಾಗಿಲ್ಲ.

ಬೇರೊಬ್ಬರು ಸಿಡಿಸುತ್ತಿದ್ದ ಬಿಜಿಲಿ ಪಟಾಕಿಯಿಂದ ಸಿಡಿದ ರಾಸಾಯನಿಕ ವಸ್ತು ಕಣ್ಣಿಗೆ ತಗುಲಿ ಬಾಲಕನ ಬಲಗಣ್ಣಿಗೆ ಗಾಯವಾಗಿದೆ. ಶುಕ್ರವಾರ ಮಿಂಟೋ ಆಸ್ಪತ್ರೆಗೆ ಭೇಟಿ ನೀಡಿದ್ದ ಬಾಲಕನಿಗೆ ವೈದ್ಯರು ಚಿಕಿತ್ಸೆ ನೀಡಿ ಕಳುಹಿಸಿದ್ದಾರೆ. ಕಣ್ಣು ಅಥವಾ ದೃಷ್ಟಿಗೆ ಯಾವುದೇ ಹಾನಿಯಾಗಿಲ್ಲ ಎಂದು ತಿಳಿದುಬಂದಿದೆ. ವೈದ್ಯಕೀಯ ಪರೀಕ್ಷೆಯಲ್ಲಿ ಬಾಲಕನ ಬಲಗಣ್ಣಿನಲ್ಲಿ ರಾಸಾಯನಿಕದಿಂದ ಉಂಟಾಗುವ ಹಾನಿ (ಗ್ರೇಡ್–2 ಕೆಮಿಕಲ್ ಇಂಜುರಿ) ಪತ್ತೆಯಾಗಿದೆ. ಎಡಗಣ್ಣಿನಲ್ಲಿ ಯಾವುದೇ ಸಮಸ್ಯೆ ಕಂಡುಬಂದಿಲ್ಲ. ಕಣ್ಣು ಸ್ವಚ್ಛಗೊಳಿಸಿ ಚಿಕಿತ್ಸೆ ನೀಡಿ ಕಳುಹಿಸಲಾಗಿದೆ. ಹಬ್ಬಕ್ಕೂ ಮೊದಲೇ ಪಟಾಕಿ ಸಿಡಿತದಿಂದ ಗಾಯಗಳು ವರದಿಯಾಗುತ್ತಿದ್ದು, ಮಕ್ಕಳು ಆದಷ್ಟು ಪಟಾಕಿಯಿಂದ ದೂರವಿರಬೇಕು ಎಂದು ವೈದ್ಯರು ಸಲಹೆ ನೀಡಿದ್ದಾರೆ.

ಪಟಾಕಿಗಳ ಬಗ್ಗೆ ಎಚ್ಚರಿಕೆ ವಹಿಸಿ: ಡಾ. ಶ್ರೀಭಾರ್ಗವ

ಮಕ್ಕಳು ದೊಡ್ಡವರ ಮೇಲ್ವಿಚಾರಣೇಲಿ ಪಟಾಕಿ ಸಿಡಿಸಿ

ಬೆಂಗಳೂರು: ದೀಪಾವಳಿ ಹಬ್ಬದ ವೇಳೆ ಪಟಾಕಿಗಳಿಂದ ಉಂಟಾಗುವ ಗಾಯಗಳು ಶಾಶ್ವತ ದೃಷ್ಟಿ ನಷ್ಟಕ್ಕೆ ಕಾರಣವಾಗಬಹುದು. ಆದ್ದರಿಂದ ಸಾರ್ವಜನಿಕರು ಎಚ್ಚರಿಕೆ ವಹಿಸಿ ಸುರಕ್ಷಿತವಾಗಿ ಹಬ್ಬ ಆಚರಿಸುವಂತೆ ವಿಟ್ರಿಯೊರೆಟಿನಲ್ ಶಸ್ತ್ರಚಿಕಿತ್ಸಾ ತಜ್ಞರು ಹಾಗೂ ನೇತ್ರ ಆಸ್ಪತ್ರೆ ನಿರ್ದೇಶಕ ಡಾ. ಶ್ರೀಭಾರ್ಗವ ನಟೇಶ್ ಎಚ್ಚರಿಕೆ ನೀಡಿದ್ದಾರೆ.

ಮಕ್ಕಳು ದೊಡ್ಡವರ ಮೇಲ್ವಿಚಾರಣೆಯಲ್ಲೇ ಪಟಾಕಿ ಸಿಡಿಸಬೇಕು, ರಕ್ಷಣಾತ್ಮಕ ಕನ್ನಡಕ ಧರಿಸಬೇಕು, ಸುರಕ್ಷಿತ ಅಂತರ ಕಾಯ್ದುಕೊಳ್ಳಬೇಕು ಹಾಗೂ ಸಿಡಿಯದ ಪಟಾಕಿಗಳನ್ನು ಮತ್ತೆ ಹೊತ್ತಿಸಲು ಪ್ರಯತ್ನಿಸಬಾರದು ಎಂದು ಸಲಹೆ ನೀಡಿದ್ದಾರೆ. ಪಟಾಕಿಯಿಂದ ಕಣ್ಣಿಗೆ ಗಾಯವಾದರೆ ಕಣ್ಣು ಉಜ್ಜಬಾರದು, ಒತ್ತಡ ಹಾಕಬಾರದು ಅಥವಾ ಗಾಯಗೊಂಡ ಕಣ್ಣಿನಿಂದ ಪಟಾಕಿ ತುಣುಕುಗಳನ್ನು ತೆಗೆಯಲು ಪ್ರಯತ್ನಿಸಬಾರದು. ಕಣ್ಣಿಗೆ ರಾಸಾಯನಿಕ ಸಿಡಿದಿದ್ದರೆ ತಕ್ಷಣ ಸ್ವಚ್ಛ ಹರಿಯುವ ನೀರಿನಿಂದ ಕನಿಷ್ಠ 5 -10 ನಿಮಿಷಗಳ ಕಾಲ ಕಣ್ಣನ್ನು ತೊಳೆಯಬೇಕು. ಆದರೆ, ಕಣ್ಣಿಗೆ ಹೊಡೆತ ಅಥವಾ ಚುಚ್ಚಿದ ಗಾಯವಾಗಿದ್ದರೆ ಕಣ್ಣಿನ ಮೇಲೆ ಒತ್ತಡ ಹಾಕದೆ ತಕ್ಷಣವೇ ಸಮೀಪದ ಕಣ್ಣಿನ ಆಸ್ಪತ್ರೆಗೆ ತೆರಳಬೇಕು. ಯಾವುದೇ ಮನೆಮದ್ದು ಅಥವಾ ವೈದ್ಯರ ಸಲಹೆಯಿಲ್ಲದೆ ಕಣ್ಣಿನ ಹನಿಗಳನ್ನು ಬಳಸಬಾರದು ಎಂದು ಡಾ. ನಟೇಶ್ ತಿಳಿಸಿದ್ದಾರೆ. ಕಣ್ಣಿಗೆ ರಾಸಾಯನಿಕ ಸಿಡಿದಿದ್ದರೆ ತಕ್ಷಣ ಸ್ವಚ್ಛ ಹರಿಯುವ ನೀರಿನಿಂದ



ಮುನ್ನೆಚ್ಚರಿಕೆ

- ರಕ್ಷಣಾತ್ಮಕ ಕನ್ನಡ ಧರಿಸಿ ಮಕ್ಕಳು ಪಟಾಕಿ ಸಿಡಿಸಿ
- ಪಟಾಕಿ ಹಚ್ಚುವ ವೇಳೆ ಸುರಕ್ಷಿತ ಅಂತರ ಕಾಯ್ದುಕೊಳ್ಳಿ
- ಪಟಾಕಿಯಿಂದ ಕಣ್ಣಿಗೆ ಹಾನಿ ಆದರೆ ಉಜ್ಜುವುದು ತಪ್ಪು

ಕನಿಷ್ಠ 5 -10 ನಿಮಿಷಗಳ ಕಾಲ ಕಣ್ಣನ್ನು ತೊಳೆಯಬೇಕು. ಆದರೆ, ಕಣ್ಣಿಗೆ ಹೊಡೆತ ಅಥವಾ ಚುಚ್ಚಿದ ಗಾಯವಾಗಿದ್ದರೆ ಕಣ್ಣಿನ ಮೇಲೆ ಒತ್ತಡ ಹಾಕದೆ ತಕ್ಷಣವೇ ಸಮೀಪದ ಕಣ್ಣಿನ ಆಸ್ಪತ್ರೆಗೆ ತೆರಳಬೇಕು. ಯಾವುದೇ ಮನೆಮದ್ದು ಅಥವಾ ವೈದ್ಯರ ಸಲಹೆಯಿಲ್ಲದೆ ಕಣ್ಣಿನ ಹನಿಗಳನ್ನು ಬಳಸಬಾರದು ಎಂದು ಡಾ. ನಟೇಶ್ ತಿಳಿಸಿದ್ದಾರೆ.

KVB Karur Vysya Bank Smart way to bank

ಅಸೆಟ್ ರಿಕವರಿ ಶಾಖೆ, ವಿಭಾಗೀಯ ಕಛೇರಿ ಕಟ್ಟಡ, ನಂ.6, ಶ್ರೀ ವಾಸವಿ ದೇವಸ್ಥಾನ ರಸ್ತೆ, ಸಜ್ಜನ್ ರಾವ್ ಸರ್ಕಲ್, ವಿವಿ ಪುರಂ, ಬೆಂಗಳೂರು–560004

ಸ್ಥಿರಾಸ್ತಿಗಳ ಮಾರಾಟಕ್ಕೆ ಸೂಚನೆ

8(6) ರ ನಿಬಂಧನೆಯೊಂದಿಗೆ ಭದ್ರತಾ ಹಿತಾಸಕ್ತಿ (ಎನ್‌ಫೋರ್ಸ್‌ಮೆಂಟ್) 2002 ರ ನಿಯಮಗಳು ಓದಿಕೊಂಡಂತೆ ಸೆಕ್ಯುರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಭದ್ರತಾ ಹಿತಾಸಕ್ತಿ ಕಾಯ್ದೆ, 2002 ರನ್ವಯ ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ–ಹರಾಜು ಮಾರಾಟದ ಸೂಚನೆ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ **ದಿ ಕರೂರ್ ವೈಶ್ಯ ಬ್ಯಾಂಕ್ ಲಿಮಿಟೆಡ್,** ರವರು ರಚನಾತ್ಮಕವಾಗಿ/ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ **ದಿನಾಂಕ: 09.12.2026** ರಂದು ಸ್ವತ್ತನ್ನು **"ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಏನಿದೆಯೋ ಹಾಗೆ"** ಮತ್ತು **"ಅಲ್ಲಿ ಏನೇ ಇರಲಿ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು. ಸಂದಾಯವಾಗತಕ್ಕ ಮೊಬಲಗು: **ರೂ.1,78,63,913.75** (ರೂಪಾಯಿ ಒಂದು ಕೋಟಿ ಎಪ್ಪತ್ತೆಂಟು ಲಕ್ಷದ ಅರವತ್ತಮೂರು ಸಾವಿರದ ಒಂಭೈನೂರ ಹದಿಮೂರು ಮತ್ತು ಎಪ್ಪತ್ತೈದು ಪೈಸೆ ಮಾತ್ರ) **ದಿ ಕರೂರ್ ವೈಶ್ಯ ಬ್ಯಾಂಕ್ ಲಿಮಿಟೆಡ್** ಭದ್ರತಾ ಸಾಲದಾತರವರಿಂದ **ಸಾಲಗಾರರು: (1) M/S Misha Impex** ಇದನ್ನು ಪ್ರತಿನಿಧಿಸುವ ಪಾಲುದಾರರು, ನಂ.76, ಕಸ್ತೂರಬಾ ನಗರ, ಪೈಪ್‌ಲೈನ್ ಪಶ್ಚಿಮ, ಬೆಂಗಳೂರು–560026. **ಮತ್ತೊಂದು ವಿಳಾಸ:** ನೆಲ ಮಹಡಿ, ಗಾಲಾ ನಂ.5, ಎಸ್ 8 ಮೋತಿ ಉದ್ಯೋಗ್ ಟೀಕಾ ಹೌಸ್, ಕಂಚಪಾದ ರಾಮಚಂದ್ರ ಲೇನ್, ಮಲಾಡ್ ಪಶ್ಚಿಮ, ಮುಂಬೈ ಸಬ್‌ಅರ್ಬ್, ಮಹಾರಾಷ್ಟ್ರ–400064. **(2) ಶ್ರೀಮತಿ ಶೃತಿ ಗುಪ್ತಾ** ಕೋಂ ಸುರೇಶ್ ಕುಮಾರ್ (ಪಾಲುದಾರರು, ಶೀರ್ಷಿಕೆದಾರರು, ಜಾಮೀನುದಾರರು) ನಂ: 48/7, ರಂಗ ರಾವ್ ರಸ್ತೆ, ಕೆಎಫ್‌ಸಿ ಬಸವನಗುಡಿ ಶಂಕರಪುರಂ, ಬೆಂಗಳೂರು ದಕ್ಷಿಣ, ಕರ್ನಾಟಕ–560004. **(3) ಶ್ರೀ ಚೇತನ್ ಭೋಗಿಲಾಲ್ ಮೆಹ್ತಾ** ಬಿನ್ ಭೋಗಿಲಾಲ್ ಮನಿಲಾಲ್ ಮೆಹ್ತಾ (ಪಾಲುದಾರರು, ಜಾಮೀನುದಾರರು) ಫ್ಲಾಟ್ ನಂ.702, 7ನೇ ಮಹಡಿ, ಬಿ ವಿಂಗ್, ರಿದ್ಧಿಸಿದ್ಧಿ, ಎಂಜಿ ರಸ್ತೆ, ದಾದಾ ನರ್ವಾಣೆ ಶಾಲೆಯ ಎದುರು, ಕಾಂದಿವಲಿ ಪಶ್ಚಿಮ, ಮುಂಬೈ, ಮಹಾರಾಷ್ಟ್ರ–400067. **(4) ಶ್ರೀಮತಿ ಮಿಶಿಕಾ ಗುಪ್ತಾ** ಬಿನ್ ಶ್ರುತಿ ಗುಪ್ತಾ, (ಶೀರ್ಷಿಕೆದಾರರು, ಜಾಮೀನುದಾರರು) ನಂ:48/7, ರಂಗರಾವ್ ರಸ್ತೆ, ಕೆಎಫ್‌ಸಿ ಹತ್ತಿರ, ಬಸವನಗುಡಿ, ಬೆಂಗಳೂರು, ಕರ್ನಾಟಕ–560004. ಷೆಡ್ಯೂಲ್ 1 ಆಸ್ತಿಯ ಮೀಸಲು ಬೆಲೆ **ರೂ.61,00,000** (ರೂಪಾಯಿ ಅರವತ್ತೊಂದು ಲಕ್ಷ ಮಾತ್ರ) ಮತ್ತು ಇಎಂಡಿ ಮೊತ್ತ **ರೂ. 6,10,000/–** (ರೂಪಾಯಿ ಆರು ಲಕ್ಷದ ಹತ್ತು ಸಾವಿರ ಮಾತ್ರ). ಷೆಡ್ಯೂಲ್ 2 ಆಸ್ತಿಯ ಮೀಸಲು ಬೆಲೆ **ರೂ. 44,60,000/–** (ರೂಪಾಯಿ ನಲವತ್ತನಾಲ್ಕು ಲಕ್ಷದ ಅರವತ್ತು ಸಾವಿರ ಮಾತ್ರ) ಮತ್ತು ಇಎಂಡಿ ಮೊತ್ತ **ರೂ. 4,46,000/–** (ರೂಪಾಯಿ ನಾಲ್ಕು ಲಕ್ಷದ ನಲವತ್ತಾರು ಸಾವಿರ ಮಾತ್ರ). ಷೆಡ್ಯೂಲ್ 3 ಆಸ್ತಿಯ ಮೀಸಲು ಬೆಲೆ **ರೂ. 44,60,000/–** (ರೂಪಾಯಿ ನಲವತ್ತನಾಲ್ಕು ಲಕ್ಷದ ಅರವತ್ತು ಸಾವಿರ ಮಾತ್ರ) ಮತ್ತು ಇಎಂಡಿ ಮೊತ್ತ **ರೂ. 4,46,000/–** (ರೂಪಾಯಿ ನಾಲ್ಕು ಲಕ್ಷದ ನಲವತ್ತಾರು ಸಾವಿರ ಮಾತ್ರ).

ಸ್ಥಿರಾಸ್ತಿಯ ವಿವರ: ಆಸ್ತಿ 1: (ಶ್ರೀಮತಿ ಮಿಶಿಕಾ ಗುಪ್ತಾ ಬಿನ್ ಶ್ರುತಿ ಗುಪ್ತಾ ಅವರ ಹೆಸರಿನಲ್ಲಿರುವ ಆಸ್ತಿ): ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ ನಿವೇಶನ ನಂ. 2, ಪಂಚಾಯತ್ ಖಾತ ನಂ. 405/2, ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಗಿಡ್ಡೇನಹಳ್ಳಿ ಗ್ರಾಮದ ಸರ್ವೆ ನಂ.25 ರಲ್ಲಿ ರಚಿಸಲಾಗಿದೆ (ಅಂದರೆ ಷೆಡ್ಯೂಲ್ ಎ ಆಸ್ತಿ) ವಿಸ್ತೀರ್ಣ ಪೂರ್ವಕ್ಕೆ: 58.4 ಅಡಿ, ಪಶ್ಚಿಮಕ್ಕೆ: 69.8 ಅಡಿ, ಉತ್ತರಕ್ಕೆ: 30.0 ಅಡಿ ಮತ್ತು ದಕ್ಷಿಣಕ್ಕೆ: 34.1 ಅಡಿ (ಒಟ್ಟು ವಿಸ್ತೀರ್ಣ 2054.05 ಚದರ ಅಡಿ) ಈ ಆಸ್ತಿಯು **"ಮಹಾವೀರ್ ಫ್ಲಾಟಿನಂ"** ಗಿಡ್ಡೇನಹಳ್ಳಿ ಗ್ರಾಮ, ಮತ್ತು ಮಹಾಂತಲಿಂಗಪುರ ಗ್ರಾಮ, ಜಿಗಣೀ ಹೋಬಳೀ, ಆನೇಕಲ್ ಯೋಜನಾ ಪ್ರಾಧಿಕಾರ(ಎಪಿಎ)ವೈಡ್ ನಂ. LAO/05/13-14 ದಿನಾಂಕ: 29.04.2014 ರಂದು ಅಭಿವೃದ್ಧಿಗೊಂಡಿದೆ ಮತ್ತು ಚಕ್ಕುಬಂದಿ:ಪೂರ್ವಕ್ಕೆ: ಫ್ಲಾಟ್ ಸಂಖ್ಯೆ 3, ಪಶ್ಚಿಮಕ್ಕೆ: ಫ್ಲಾಟ್ ಸಂಖ್ಯೆ 1, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಾಸಗಿ ಆಸ್ತಿ.

ಆಸ್ತಿ 2: (ಶ್ರೀಮತಿ ಶ್ರುತಿ ಗುಪ್ತಾ ಅವರ ಹೆಸರಿನಲ್ಲಿ ಆಸ್ತಿ ಇದೆ): ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ವಾಸಯೋಗ್ಯ ಫ್ಲಾಟ್ ಮೂರು ಬೆಡ್‌ರೂಮ್‌ಗಳನ್ನೊಳಗೊಂಡಿರುವ ಅಪಾರ್ಟ್‌ಮೆಂಟ್ ನಂ. AFS 309 ಮತ್ತು ಇ–ಖಾತಾ ಸಂಖ್ಯೆ.150200100200321183, ಎರಡನೇ ಮಹಡಿಯಲ್ಲಿ 924 ಚದರ ಅಡಿ ಮತ್ತು 329 ಚದರ ಅಡಿಗಳ ಸೂಪರ್ ಬಿಲ್ಟ್ ಅಪ್ ವಿಸ್ತೀರ್ಣವನ್ನು ಹೊಂದಿರುವ ಫ್ಲಾಟ್ ಜೊತೆಗೆ "ಸರ್ವೆ ನಂ.38/1, ಸರ್ವೆ ನಂ. 39, ಹೊಸ ಸರ್ವೆ ನಂ. 39/408 ಒಟ್ಟು ವಿಸ್ತೀರ್ಣ 2–15 ಎಕರೆ 15 ಗುಂಟೆಯಲ್ಲಿ ನಿರ್ಮಿಸಲಾದ "ARYAN FOUNTAIN SQUARE" ಕಟ್ಟಡದಲ್ಲಿ ಅವಿಭಜಿತ ಪಾಲು ಇದೆ. ಬೆಂಗಳೂರು ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಗಳು 24.07.2007 ರಂದು ಆದೇಶ ಸಂಖ್ಯೆ. ALN(A)(K&A) SR186&187/ 2005-06 ರಲ್ಲಿ ಕೃಷಿಯೇತರ ವಾಸಯೋಗ್ಯ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ", ಈ ಆಸ್ತಿಯು ಇಂಡ್ಲಬೆಲೆ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆಯಲ್ಲಿದೆ, ಜೊತೆಗೆ ಇದರಲ್ಲಿ ಮಹಡಿಗಳು, ಸೀಲಿಂಗ್ ಮತ್ತು ಗೋಡೆಗಳು ಜಂಟಿಯಾಗಿ ಅಂತಹ ಅಪಾರ್ಟ್‌ಮೆಂಟ್ ಮಾಲೀಕರಿಗೆ ಸಾಮಾನ್ಯ ಪ್ರದೇಶವನ್ನು ಒಳಗೊಂಡಂತೆ ಸಮಾನವಾಗಿ ಸೇರಿವೆ. ಈ ನಿರ್ಮಾಣವು ಲಿವಿಂಗ್ & ಡೈನಿಂಗ್‌ನಲ್ಲಿ ವಿಟ್ರಿಫೈಡ್ ಫ್ಲೋರಿಂಗ್, ಬೆಡ್‌ರೂಮ್‌ಗಳಲ್ಲಿ ಸೆರಾಮಿಕ್/ಆಂಟಿಸ್ಕಿಡ್ ಫ್ಲೋರಿಂಗ್, ಅಡುಗೆಮನೆ ಮತ್ತು ಬಾಲ್ಕನಿ, ಅಲ್ಯೂಮಿನಿಯಂ ಕಿಟಕಿಗಳು ಮತ್ತು ಸಾಲ್ ವುಡ್ ಫ್ರೇಮ್ ಮತ್ತು ತೇಗದ ವೆನೀರ್ ಒತ್ತಿದ ಫ್ಲಷ್ ಡೋರ್ ಮತ್ತು ಸಾಲ್ ವುಡ್ ಫ್ರೇಮ್‌ಗಳು ಮತ್ತು ಫ್ಲಷ್ ಡೋರ್‌ಗಳ ಮುಖ್ಯ ಬಾಗಿಲು, ಪ್ರತ್ಯೇಕ ವಿದ್ಯುತ್, ಸಾಮಾನ್ಯ ನೀರು ಸೇರಿದಂತೆ ಸಾಮಾನ್ಯ ಪ್ರದೇಶ ಹಕ್ಕುಗಳನ್ನು ಮುಕ್ತ ಕಾರ್ ಪಾರ್ಕಿಂಗ್‌ನೊಂದಿಗೆ ಹೊಂದಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ತೆರೆದ ಜಾಗ & ಫ್ಲಾಟ್ ಸಂಖ್ಯೆ. 308, ಪಶ್ಚಿಮಕ್ಕೆ: ತೆರೆದ ಸ್ಥಳ & ಫ್ಲಾಟ್ ಸಂಖ್ಯೆ. 310,ಉತ್ತರಕ್ಕೆ: ಕಾರಿಡಾರ್, ದಕ್ಷಿಣಕ್ಕೆ: ಖಾಸಗಿ ಆಸ್ತಿ.

ಆಸ್ತಿ 3: (ಶ್ರೀಮತಿ ಶ್ರುತಿ ಗುಪ್ತಾ ಅವರ ಹೆಸರಿನಲ್ಲಿ ಆಸ್ತಿ ಇದೆ): ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ವಾಸಯೋಗ್ಯ ಫ್ಲಾಟ್ ಮೂರು ಬೆಡ್‌ರೂಮ್‌ಗಳನ್ನೊಳಗೊಂಡಿರುವ ಅಪಾರ್ಟ್‌ಮೆಂಟ್ ನಂ. AFS 127 ಮತ್ತು ಇ–ಖಾತಾ ಸಂಖ್ಯೆ.150200100200321101, ನೆಲ ಮಹಡಿಯಲ್ಲಿ 924 ಚದರ ಅಡಿಗಳ ಸೂಪರ್ ಬಿಲ್ಟ್ ಅಪ್ ವಿಸ್ತೀರ್ಣವನ್ನು ಹೊಂದಿರುವ ಫ್ಲಾಟ್ ಜೊತೆಗೆ " ಸರ್ವೆ ನಂ.38/1, ಹೊಸ ಸರ್ವೆ ನಂ. 38/1, ಸರ್ವೆ ನಂ. 39, ಹೊಸ ಸರ್ವೆ ನಂ. 39/408 ವಿಸ್ತೀರ್ಣ 2 ಎಕರೆ 15 ಗುಂಟೆ ನಲ್ಲಿ ನಿರ್ಮಿಸಲಾದ "ARYAN FOUNTAIN SQUARE" ಕಟ್ಟಡದಲ್ಲಿ ಅವಿಭಜಿತ ಪಾಲು ಇದೆ. ಬೆಂಗಳೂರು ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಗಳು 24.07.2007 ರಂದು ಆದೇಶ ಸಂಖ್ಯೆ.ALN(A)(K&A) SR186&187/ 2005-06 ರಲ್ಲಿ ಕೃಷಿಯೇತರ ವಾಸಯೋಗ್ಯ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ", ಈ ಆಸ್ತಿಯು ಇಂಡ್ಲಬೆಲೆ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆಯಲ್ಲಿದೆ, ಜೊತೆಗೆ ಇದರಲ್ಲಿ ಮಹಡಿಗಳು, ಸೀಲಿಂಗ್ ಮತ್ತು ಗೋಡೆಗಳು ಜಂಟಿಯಾಗಿ ಅಂತಹ ಅಪಾರ್ಟ್ಮೆಂಟ್ ಮಾಲೀಕರಿಗೆ ಸಾಮಾನ್ಯ ಪ್ರದೇಶವನ್ನು ಒಳಗೊಂಡಂತೆ ಸಮಾನವಾಗಿ ಸೇರಿವೆ. ಈ ನಿರ್ಮಾಣವು ಲಿವಿಂಗ್ & ಡೈನಿಂಗ್‌ನಲ್ಲಿ ವಿಟ್ರಿಫೈಡ್ ಫ್ಲೋರಿಂಗ್, ಬೆಡ್‌ರೂಮ್‌ಗಳಲ್ಲಿ ಸೆರಾಮಿಕ್/ಆಂಟಿಸ್ಕಿಡ್ ಫ್ಲೋರಿಂಗ್, ಅಡುಗೆಮನೆ ಮತ್ತು ಬಾಲ್ಕನಿ, ಅಲ್ಯೂಮಿನಿಯಂ ಕಿಟಕಿಗಳು ಮತ್ತು ಸಾಲ್ ವುಡ್ ಫ್ರೇಮ್ ಮತ್ತು ತೇಗದ ವೆನೀರ್ ಒತ್ತಿದ ಫ್ಲಷ್ ಡೋರ್ ಮತ್ತು ಸಾಲ್ ವುಡ್ ಫ್ರೇಮ್‌ಗಳು ಮತ್ತು ಫ್ಲಷ್ ಡೋರ್‌ಗಳ ಮುಖ್ಯ ಬಾಗಿಲು, ಪ್ರತ್ಯೇಕ ವಿದ್ಯುತ್, ಸಾಮಾನ್ಯ ನೀರು ಸೇರಿದಂತೆ ಸಾಮಾನ್ಯ ಪ್ರದೇಶ ಹಕ್ಕುಗಳನ್ನು ಮುಕ್ತ ಕಾರ್ ಪಾರ್ಕಿಂಗ್‌ನೊಂದಿಗೆ ಹೊಂದಿದೆ ಫ್ಲಾಟ್ ನಂ.127, ವಿಸ್ತೀರ್ಣ 924 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಕಾರಿಡಾರ್, ಪಶ್ಚಿಮಕ್ಕೆ: ಆಂಫಿಥಿಯೇಟರ್, ಉತ್ತರಕ್ಕೆ: ಲಿಫ್ಟ್ ಮೆಟ್ಟಿಲು ಮತ್ತು ತೆರೆದ ಸ್ಥಳ ಮತ್ತು ಫ್ಲಾಟ್ ಸಂಖ್ಯೆ.126, ದಕ್ಷಿಣಕ್ಕೆ: ತೆರೆದ ಜಾಗ ಮತ್ತು ಲಿಫ್ಟ್.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ನಮ್ಮ ಬ್ಯಾಂಕಿನ /ಭದ್ರತಾ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ನೋಡಿ **i.e www.kvb.co.in/Property Under Auction** ಹಾಗೂ ಮತ್ತೊಂದು ವೆಬ್ ಪೋರ್ಟಲ್ **BankAuctions.in/ForeclosureIndia.com** ಸೇವಾ ಪೂರೈಕೆದಾರರು, **M/s. 4 closure.**

ಸರ್ಫೇಸಿ ಕಾಯಿದೆ, 2002ರ ನಿಯಮ 8(6) ರ ಅಡಿಯಲ್ಲಿ ಶಾಸನಬದ್ಧವಾಗಿ 30 ದಿನಗಳ ನೋಟೀಸ್ ಸಾಲಗಾರರು / ಜಾಮೀನುದಾರರಿಗೆ ಅಧಿಸೂಚಿಸುವುದೇನೆಂದರೆ ಮೇಲೆ ತಿಳಿಸಿರುವ ಬಾಕಿ ಸಾಲದ ಮೊತ್ತ ಹಾಗೂ ಸಾಲ ತೀರಿಸುವ ದಿನಾಂಕದವರೆಗೂ ಬಡ್ಡಿ ಮತ್ತು ಆನ್ಸಿಲಿಯರಿ ವೆಚ್ಚಗಳು ಸೇರಿದ ಮೊತ್ತವನ್ನು ಇ–ಹರಾಜಿಗೆ ಸೇರಿದ ದಿನಾಂಕಕ್ಕೆ ಮುಂಚೆ ಪಾವತಿ ಮಾಡಬೇಕು. ವಿಫಲರಾದಲ್ಲಿ ಆಸ್ತಿಯನ್ನು ಹರಾಜು / ಮಾರಾಟ ಮಾಡಲಾಗುತ್ತದೆ. ಹಾಗೂ ಇನ್ನೂ ಬಾಕಿ ಉಳಿದರೆ ಅದನ್ನೂ ಬಡ್ಡಿ ಮತ್ತು ವೆಚ್ಚಗಳ ಸಹಿತ ವಸೂಲು ಮಾಡಿಕೊಳ್ಳಲಾಗುವುದು.

ದಿನಾಂಕ: 07.11.2026 ಸಹಿ/– ಅಧಿಕೃತ ಅಧಿಕಾರಿ
ಸ್ಥಳ: ಬೆಂಗಳೂರು ದಿ ಕರೂರ್ ವೈಶ್ಯ ಬ್ಯಾಂಕ್ ಲಿಮಿಟೆಡ್

ಟಿನ್ ಫ್ಯಾಕ್ಟರಿ ಜಂಕ್ಷನ್ ಅಭಿವೃದ್ಧಿಗೆ ಮಾಸ್ಟರ್‌ಪ್ಲಾನ್: ಕೃಷ್ಣ ಬೈರೇಗೌಡ

2ನೇ ಹಂತದ ವಾರ್ಡ್ ಒನ್ ಅಭಿಯಾನಕ್ಕೆ ಸಚಿವರಿಂದ ಚಾಲನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಭಾರಿ ಟ್ರಾಫಿಕ್ ಜಾಮ್ ಉಂಟಾಗುವ ಕೆ.ಆರ್. ಪುರ ಟಿನ್ ಫ್ಯಾಕ್ಟರಿ ಜಂಕ್ಷನ್‌ನಲ್ಲಿ ವಾಹನಗಳ ಸುಗಮ ಸಂಚಾರದ ಯೋಜನೆ ಜೊತೆಗೆ ಪಾದಚಾರಿ ಸ್ನೇಹಿ ಜಂಕ್ಷನ್ ಆಗಿ ಅಭಿವೃದ್ಧಿಪಡಿಸಲು ಸಮಗ್ರ ಮಾಸ್ಟರ್‌ಪ್ಲಾನ್ ಸಿದ್ಧಪಡಿಸುವಂತೆ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಶನಿವಾರ ಕೆ.ಆರ್.ಪುರ ಟಿನ್ ಫ್ಯಾಕ್ಟರಿ ಜಂಕ್ಷನ್ ಬಳಿ 2ನೇ ಹಂತದ ವಾರ್ಡ್ ಒನ್ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ, ಈ ಜಂಕ್ಷನ್‌ನಲ್ಲಿ ಮೆಟ್ರೋ ಮಾರ್ಗದ ಕಾಮಗಾರಿ, ಕೆ.ಆರ್.ಪುರದಿಂದ ಐಟಿಪಿಎಲ್, ವೈಟ್ ಫೀಲ್ಡ್ ಹಾಗೂ ಮಾರತ್ತಹಳ್ಳಿ ಕಡೆಗೆ ಸಂಚರಿಸುವ ವಾಹನಗಳು ಮತ್ತು ನಗರಕ್ಕೆ ಬರುವ ವಾಹನಗಳು ಸೇರುತ್ತವೆ. ಹೀಗಾಗಿ, ಲಕ್ಷಾಂತರ ಜನ ಓಡಾಡುವ ಈ ಜಂಕ್ಷನ್‌ನಲ್ಲಿ ಭಾರಿ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದೆ ಎಂದರು.

ಜಂಕ್ಷನ್‌ನ ಸಮಗ್ರ ಅಭಿವೃದ್ಧಿಗೆ ಬಸ್ ಪಥ, ಬಸ್ ತಂಗುದಾಣ, ದೂರ ಪ್ರಯಾಣದ ಬಸ್‌ಗಳ ನಿಲುಗಡೆಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಬೇಕು. ಮೆಟ್ರೋ ರೈಲು ನಿಲ್ದಾಣದಿಂದ ಬಸ್ ತಂಗುದಾಣಕ್ಕೆ ಓಡಾಡಲು ಅನುಕೂಲವಾಗುವಂತೆ ಯೋಜನೆ ರೂಪಿಸಬೇಕು. ಆಟೋ, ಟ್ಯಾಕ್ಸಿ ಹಾಗೂ ಇತರ



ವಾಹನಗಳಲ್ಲಿ ಬರುವವರು ಸಾರ್ವಜನಿಕ ಸಾರಿಗೆಯನ್ನು ಸುಲಭವಾಗಿ ಬಳಸಲು ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಸಚಿವರು ಸೂಚಿಸಿದ್ದಾರೆ.

40 ವಾರ್ಡ್‌ಗಳಲ್ಲಿ ವಾರ್ಡ್ ಒನ್ ಅಭಿಯಾನ: ಸಣ್ಣಪುಟ್ಟ ಮೂಲಸೌಕರ್ಯ ಸಮಸ್ಯೆಗಳನ್ನು ಪರಿಹರಿಸಲು ವಾರ್ಡ್ ಒನ್ ಅಭಿಯಾನದ ಅಡಿ ಮೊದಲ ಹಂತದಲ್ಲಿ 43 ವಾರ್ಡ್‌ಗಳಲ್ಲಿ ಶೇ. 90ರಷ್ಟು ಪೂರ್ಣಗೊಂಡಿವೆ. ಎರಡನೇ ಹಂತದಲ್ಲಿ ಮತ್ತೆ 40 ವಾರ್ಡ್‌ಗಳಲ್ಲಿ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ ಎಂದು ಸಚಿವರು ಹೇಳಿದರು. ಅವಸರದಲ್ಲಿ ಅರ್ಧಂಬರ್ಧ ಕೆಲಸ ಮಾಡದೇ ಸಮರ್ಪಕವಾಗಿ ಕೆಲಸ ಮಾಡಬೇಕು. ಅಗತ್ಯವಿದ್ದಲ್ಲಿ ಡಿಸೆಂಬರ್‌ನಲ್ಲೂ ಅಭಿಯಾನ ಮುಂದುವರಿಸಲಾಗುವುದುಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದ್ದಾರೆ.

HDB FINANCIAL SERVICES ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್

ನೋಂದಾಯಿತ ಕಛೇರಿ: ರಾಧಿಕಾ, 2ನೇ ಮಹಡಿ, ಲಾ ಗಾರ್ಡನ್ ರಸ್ತೆ, ನವರಂಗ್‌ಪುರ್, ಅಹಮದಾಬಾದ್-09. ಪ್ರಾದೇಶಿಕ ಕಛೇರಿ: ನೆಲಮಹಡಿ, ಝುನಿತ್ ಹೌಸ್, ರೇಸ್ ಕೋರ್ಸ್ ಎದುರು, ಮಹಾಲಕ್ಷ್ಮಿ, ಮುಂಬೈ-34. ದೂ: 022-39586300 ಫ್ಯಾಕ್ಸ್: 022-39586666. ಶಾಖಾ ಕಛೇರಿ : ಸಂ. 195/38, 1ನೇ ಮಹಡಿ, ಹೆಚ್‌ಡಿಎಫ್‌ಸಿ ಕಟ್ಟಡ, 10ನೇ ಅಡ್ಡರಸ್ತೆ, ವಿಲ್ಸನ್ ಗಾರ್ಡನ್ ಬೆಂಗಳೂರು-27. Web:www.hdbfs.com, Email ID: compliance@hdfs.com

ಹರಾಜು ಮಾರಾಟ ಸೂಚನೆ ಕಂ ಇ-ಹರಾಜು ಮಾರಾಟ ಸೂಚನೆ

(ಸಾಲಗಾರರು/ಸಹ - ಅರ್ಜಿದಾರರು/ಸಾರ್ವಜನಿಕರಿಗೆ) (2002ರ ಸರ್ಫೇಸಿ ಕಾಯ್ದೆಯ ನಿಯಮ 9(1)ರ ಜೊತೆಗೆ ಓದಿಕೊಳ್ಳಬೇಕಾದ ನಿಯಮ ಆರ್/ಡಬ್ಲ್ಯು 8(6)ರಡಿ)

ಕೆಳಸಹಿದಾರರು, **ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್**ನಲ್ಲಿ ಅಧಿಕೃತ ಅಧಿಕಾರಿಯಾಗಿದ್ದು, ಕೆಳಕಂಡ ಸಾಲ ಖಾತೆಗಳಿಗೆ ಸೇರಿದ ಆಸ್ತಿಗಳನ್ನು ''ಎಲ್ಲಿ ಏನಿದೆಯೋ ಮತ್ತು ಎಲ್ಲಿ ಹೇಗಿದೆಯೇ ಹಾಗೆಯೇ ಆಧಾರದಲ್ಲಿ'' ಮಾರಾಟ ಮಾಡಬಹುದಾದ ಹಕ್ಕಿನೊಂದಿಗೆ, 2002ರ ಹಣಕಾಸು ಆಸ್ತಿಗಳ ಪ್ರಭೂತೀಕರಣ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಸ್ವಾಧೀನತೆಗೆ ಪಡೆದುಕೊಂಡಿರುತ್ತಾರೆ.

ಅರ್ಜಿದಾರರು ಮತ್ತು ಸಹ-ಅರ್ಜಿದಾರ ಹೆಸರು ಮತ್ತು ವಿಳಾಸ: 1) ಆರ್ ನರೇಂದ್ರ, 1. ಆರ್ ನರೇಂದ್ರ, ಸಂ. 117/ಎ, ಟೀಚರ್ಸ್ ಬಡಾವಣೆ, ಎಂಎಸ್ ಪಾಳ್ಯ, ವಿದ್ಯಾರಣ್ಯಪುರ, ಬೆಂಗಳೂರು ಉತ್ತರ, ಬೆಂಗಳೂರು- 560097, ಕರ್ನಾಟಕ, 2) ಪವಿತ್ರ ಎಸ್, ಸಂ. 117/ಎ, 2ನೇ ಕ್ರಾಸ್, 3ನೇ ಮೈನ್, ದೇವ ಮಾತಾ ಹತ್ತಿರ, ಟೀಚರ್ಸ್ ಬಡಾವಣೆ, ಬೆಂಗಳೂರು ಉತ್ತರ, ವಿದ್ಯಾರಣ್ಯಪುರ, ಬೆಂಗಳೂರು- 560097, ಕರ್ನಾಟಕ, 3) ದೀಪಾ ಆರ್, ಸಂ. 117/ಎ, 2ನೇ ಕ್ರಾಸ್, 3ನೇ ಮೈನ್, ದೇವ ಮಾತಾ ಶಾಲೆ ಹತ್ತಿರ, ಟೀಚರ್ಸ್ ಬಡಾವಣೆ, ಬೆಂಗಳೂರು ಉತ್ತರ, ವಿದ್ಯಾರಣ್ಯಪುರ, ಬೆಂಗಳೂರು- 560097, ಕರ್ನಾಟಕ, 4) ಸರವಣ ಆರ್ ಸಂ. 117/ಎ, ಟೀಚರ್ಸ್ ಬಡಾವಣೆ, ವಿದ್ಯಾರಣ್ಯಪುರ, ಬೆಂಗಳೂರು ಉತ್ತರ, ಬೆಂಗಳೂರು- 560097, ಕರ್ನಾಟಕ, 5) ಪರಮೇಶ್ವರಿ ಎ, ಸಂ. 117/ಎ, ಟೀಚರ್ಸ್ ಬಡಾವಣೆ, ಎಂಎಸ್ ಪಾಳ್ಯ, ಬೆಂಗಳೂರು ಉತ್ತರ, ವಿದ್ಯಾರಣ್ಯಪುರ, ಬೆಂಗಳೂರು- 560097, ಕರ್ನಾಟಕ. 6) ಪವಿತ್ರ ಎಸ್, ಸಂ. 117/ಎ, ಟೀಚರ್ಸ್ ಬಡಾವಣೆ, ಎಂಎಸ್ ಪಾಳ್ಯ, ವಿದ್ಯಾರಣ್ಯಪುರ, ಬೆಂಗಳೂರು - 560097, ಕರ್ನಾಟಕ, 7) ದೀಪಾ ಎನ್. ಸಂ. 117/ಎ, ಟೀಚರ್ಸ್ ಬಡಾವಣೆ, ಎಂಎಸ್ ಪಾಳ್ಯ, ವಿದ್ಯಾರಣ್ಯಪುರ, ಬೆಂಗಳೂರು - 560097, ಕರ್ನಾಟಕ, 8) ಬಿ ರವಿ, ಸಂ. 117/ಎ, ಟೀಚರ್ಸ್ ಬಡಾವಣೆ, ಎಂಎಸ್ ಪಾಳ್ಯ, ವಿದ್ಯಾರಣ್ಯಪುರ, ಬೆಂಗಳೂರು - 560097, ಸಾಲದ ಖಾತೆ ಸಂ. 8313861/14007086, ಒಟ್ಟಾರೆ ಮೊತ್ತ ರೂ. ರೂ. 29,32,640.16/- (ಇಪ್ಪತ್ತೊಂಭತ್ತು ಲಕ್ಷದ ಮೂವತ್ತೆರಡು ಸಾವಿರದ ಆರುನೂರ ನಲವತ್ತು ಮತ್ತು ಹದಿನಾರು ಪೈಸೆ ಮಾತ್ರ) 04-11-2026ರಂದು ಇದ್ದಂತೆ. ತದನಂತರದ ಬಡ್ಡಿ/ಪ್ರಾಸಂಗಿಕ ವೆಚ್ಚಗಳೊಂದಿಗೆ /ಪೂರ್ಣ ಪಾವತಿ ದಿನಾಂಕದವರೆಗೆ ವೆಚ್ಚಗಳು.

ಋಣಭಾದ್ಯತೆ ವಿವರ, ಏನಾದರೂ ಇದ್ದಲ್ಲಿ, ಭದ್ರತಾ ಸಾಲಿಗರಿಗೆ ತಿಳಿದಿರುವಂತೆ ಋಣಭಾದ್ಯತೆಗಳು :- ನಿಲ್

ಸ್ಥಿರಾಸ್ತಿಯ ವಿವರಗಳು:- ಉತ್ತರ ಭಾಗದ ನಿವೇಶನ ಸಂ. 117ಎ, ಖಾತಾ ಸಂ. 58ರಲ್ಲಿ ರೂಪುಗೊಂಡಿದ್ದು, ಗ್ರಾಮಪಂಚಾಯಿತಿ ಸಂ. 729/58, ಜಾರಕಬಂಡೆ ಕಾವಲ್ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: (24+20)/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 40 ಅಡಿ, ಒಟ್ಟಾರೆ ಅಳತೆ: 880ಚ.ಅ. ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಇತರರ ಆಸ್ತಿ, ಉತ್ತರಕ್ಕೆ : ಇದೇ ನಿವೇಶನದ ಉಳಿಕೆ ಭಾಗ, ದಕ್ಷಿಣಕ್ಕೆ: ನಿವೇಶನ ಸಂ. 117.

ಮೀಸಲು ಬೆಲೆ	ಅರ್ನೆಸ್ಟ್ ಮನಿ ಡಿಪಾಸಿಟ್	ಬಿಡ್ ಹೆಚ್ಚಳದ ಮೊತ್ತ	ಹರಾಜಿನ ದಿನಾಂಕ ಮತ್ತು ಸಮಯ	ಇಎಂಡಿ ಕೊನೆ ದಿನಾಂಕ ಮತ್ತು ಸಮಯ
Rs.93,50,000/-	Rs.9,35,000/-	Rs.1,00,000/-	11.12.2026 ಬೆಳಗ್ಗೆ 11 ರಿಂದ ಮಧ್ಯಾಹ್ನ 12ರವರೆಗೆ ಜೊತೆಗೆ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ	10.12.2026 ಸಂಜೆ 06:00 ರವರೆಗೆ

ಷರತ್ತು ಮತ್ತು ನಿಬಂಧನೆಗಳು ಟೆಂಡರ್ ಕಂ-ಹರಾಜು ಮಾರಾಟ:

1) ಹರಾಜು ಮಾರಾಟವು ''**ಆನ್‌ಲೈನ್ ಇ-ಹರಾಜು**'' ಆಗಿದ್ದು, **ವೆಬ್‌ಸೈಟ್ https://www.bankeauctions.com** ಮೂಲಕ ನಡೆಯುತ್ತದೆ. 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ಮೇಲಿನ ಕೋಷ್ಟಕದ ಮೊಬೈಲ್ ಆ್ಯಪ್‌ನಲ್ಲಿ ವಿವರಿಸಲಾಗಿದೆ.2) ಇಚ್ಛೆಯುಳ್ಳ ಬಿಡ್‌ದಾರರು ಇಎಂಡಿಯನ್ನು ವೆಬ್ ಪೋರ್ಟಲ್ **https://www.bankeauctions.com** ನಲ್ಲಿ ರಿಜಿಸ್ಟರ್ ಮಾಡಿ (ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ನ್ನು ಉಚಿತವಾಗಿ **https://www.bankeauctions.com**)ನಲ್ಲಿ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಮೂಲಕ ಪಡೆದುಕೊಳ್ಳಬೇಕು. ಇಎಂಡಿ ಮೀಸಲು ಬೆಲೆಯ 10% ರಷ್ಟು ಇಎಂಡಿಯನ್ನು ''**ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸ್ ಲಿಮಿಟೆಡ್**'' ಹೆಸರಿಗಿರುವ ಪೇ-ಆರ್ಡರ್/ಡಿಮಾಂಡ್ ಡ್ರಾಫ್ಟ್ ಮೂಲಕ ಪಾವತಿಸಬೇಕು ಮೇಲೆ ತಿಳಿಸಿದ ರಿಜಿಸ್ಟ್ರೇಷನ್ (ಒಂದು ಸಲ)ಅನ್ನು ಬಿಡ್‌ದಾರರು ವೆಬ್‌ಪೋರ್ಟಲ್‌ನಲ್ಲಿ ಮಾಡಿಕೊಳ್ಳಬೇಕು ತದನಂತರ ಇಚ್ಛೆಯುಳ್ಳ ಬಿಡ್‌ದಾರರು/ಖರೀದಿದಾರರು ಕೆಳಕಂಡ ದಾಖಲೆಗಳನ್ನು ಅಂದರೇ i)ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಚಲನ್ ಅಥವಾ ಡಿಮಾಂಡ್ ಡ್ರಾಫ್ಟ್ ii) ಪಾನ್ ಕಾರ್ಡ್ ಕಾಪಿ, iii) ಗುರ್ತಿನ ವಿಳಾಸದ ಪುರಾವೆ (ಕೆವೈಸಿ) ಅಂದರೇ ಸ್ವ-ದೃಢೀಕೃತ ಐಡಿ ಕಾರ್ಡ್/ ಡ್ರೈವಿಂಗ್ ಲೈಸನ್ /ಪಾಸ್‌ಪೋರ್ಟ್ ಇತ್ಯಾದಿ ಇವುಗಳನ್ನು ಪೋರ್ಟಲ್‌ನೊಂದಿಗೆ ಅಪ್‌ಲೋಡ್ ಮಾಡಿ ನೋಂದಾಯಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ಬಿಡ್ ತಿರಸ್ಕೃತವಾಗುವುದು. ಅನೆಕ್ಷರ್-II & III ರ ಸ್ಕಾನ್ ಮಾಡಿದ ಪ್ರತಿಯನ್ನು ಅಪ್‌ಲೋಡಿಂಗ್ (ವೆಬ್ ಪೋರ್ಟಲ್ **https://www.bankeauctions.com**ನಲ್ಲಿ ಅಪ್‌ಲೋಡ್ ಮಾಡಬಹುದು) ಭರ್ತಿ ಮಾಡಿದ ನಂತರ ಮತ್ತು ಸಹಿ ಹಾಕುವುದು ಸಹ ಅಗತ್ಯವಿರುತ್ತದೆ. ಇಚ್ಛೆಯುಳ್ಳ ಬಿಡ್‌ದಾರರಿಗೆ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಮಾಡಿಕೊಳ್ಳಲು ನೆರವು ಹಾಗೂ ಆನ್‌ಲೈನ್ ಇಂಟರ್ ಸೇ ಬಿಡ್ಡಿಂಗ್ ಇತ್ಯಾದಿಗಾಗಿನ ತರಬೇತಿ/ಪ್ರಾತ್ಯಕ್ಷಿಕೆ ಬೇಕಾದಲ್ಲಿ **ಮೆ|| ಸಿ1 ಇಂಡಿಯಾ ಪ್ರೈ.ಲಿ., ಉದ್ಯೋಗ್ ವಿಹಾರ್, ಫೇಸ್-2, ಗಲ್ಫ್ ಪೆಟ್ರೋಕೆಮ್ ಕಟ್ಟಡ, ಕಟ್ಟಡದ ಸಂ. ಗುರಗಾವ್, ಹರಿಯಾಣ. ಪಿಐಎನ್: 122015, ಇ-ಮೇಲ್ ಐಡಿ: support@bankeauctions.com, Support Helpline Numbers: 124-4302020/21/22/23, 7291981124/1125/1126**, ಮಾರಾಟದ ವಿಚಾರಣೆಗಾಗಿ: **sales@bankeauctions.com, 7291981129.** 3) ಇಚ್ಛೆಯುಳ್ಳ ಬಿಡ್‌ದಾರರು ಹರಾಜಿನಲ್ಲಿ ವೈಯುಕ್ತಿಕವಾಗಿ ಹಾಜರಿದ್ದು ಮತ್ತು ವೈಯುಕ್ತಿಕವಾಗಿ ಭಾಗವಹಿಸಬೇಕು ಮತ್ತು ಅವನು/ಅವಳು ಅವನಿಗಾಗಿ/ಅವಳಿಗಾಗಿ ಬಿಡ್ ಸಲ್ಲಿಸುತ್ತಿರುವ ಬಗ್ಗೆ ಲಿಖಿತವಾಗಿ ಘೋಷಣೆ ನೀಡಬೇಕು. ಯಾವುದೇ ಅಧಿಕಾರ ಪಡೆದ ವ್ಯಕ್ತಿಗೆ ಅನುಮತಿಯಿರುವುದಿಲ್ಲ. **4)** ಇಚ್ಛೆಯುಳ್ಳ ಬಿಡ್‌ದಾರರು ಟೆಂಡರ್ ಫಾರಂಗಳನ್ನು ವ್ಯವಸ್ಥಾಪಕರು **ಮೆ|| ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್, ಸಂ. 195/38, 1ನೇ ಮಹಡಿ, ಹೆಚ್‌ಡಿಎಫ್‌ಸಿ ಕಟ್ಟಡ, 10ನೇ ಕ್ರಾಸ್ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು- 27.** ಇಲ್ಲಿಂದ ಪಡೆಯಬಹುದಾಗಿದೆ. ಇಚ್ಛೆಯುಳ್ಳ ಬಿಡ್‌ದಾರರು ಅವರ ಬಿಡ್‌ಗಳನ್ನು ನಿಗದಿತ ಟೆಂಡರ್ ನಮೂನೆಯಲ್ಲಿ ಮೊಹರಾದ ಲಕೋಟೆಯಲ್ಲಿಟ್ಟು ಅಧಿಕೃತ ಅಧಿಕಾರಿಗಳು **ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್** ಇವರಿಗೆ ಮೀಸಲು ಬೆಲೆಯ 10% ರಷ್ಟು ಮೌಲ್ಯದ ''**ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸ್ ಲಿಮಿಟೆಡ್**'' ಪದನಾಮಕ್ಕಿರುವ ಇಎಂಡಿಗಾಗಿನ ಪೇ ಆರ್ಡರ್/ ಡಿಮಾಂಡ್ ಡ್ರಾಫ್ಟ್‌ನೊಂದಿಗೆ ಟೆಂಡರ್-ಕಂ-ಹರಾಜು ಮಾರಾಟವು ಅಧಿಸೂಚಿತಗೊಂಡಿರುವ ದಿನಾಂಕ **10.12.2026 ರ ಸಂಜೆ 6ಕ್ಕೆ** ಅಥವಾ ಮುಂಚಿತವಾಗಿ ಸಲ್ಲಿಸಬೇಕು. 5) ಆಸ್ತಿಯ ಪರಿಶೀಲನೆ ಮತ್ತು ಇತರೆ ವಿವರಗಳಿಗಾಗಿ: **ಮೆ|| ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್, ಸಂ. 195/38, 1ನೇ ಮಹಡಿ, ಹೆಚ್‌ಡಿಎಫ್‌ಸಿ ಕಟ್ಟಡ, 10ನೇ ಕ್ರಾಸ್ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು-27. ವ್ಯವಸ್ಥಾಪಕರು ಶ್ರೀಮತಿ ರಾಗಿಣಿ ಎಂ.ಕೆ. - 9110609817 ಮತ್ತು ಶ್ರೀ ಅನಿಲ್ ಶ್ರೀನಿವಾಸ- 8618401883.** ಇವರನ್ನು ಸಂಪರ್ಕಿಸಬೇಕು, ಆಸ್ತಿಯನ್ನು ''**ಎಲ್ಲಿ ಹೇಗಿದೆಯೋ ಹಾಗೆಯೇ ಮತ್ತು ಎಲ್ಲಿ ಏನಿದೆಯೋ ಹಾಗೆಯೇ**'' ಆಧಾರದ ಸ್ಥಿತಿಯಲ್ಲಿ ಮಾರಾಟ ಮಾಡಲಾಗುತ್ತದೆ. **6)** ಮುಚ್ಚಿದ ಟೆಂಡರ್‌ಗಳನ್ನು ಹಾಜರಿರಲು ಇಚ್ಛೆಯುಳ್ಳ ಬಿಡ್‌ದಾರರ ಹಾಜರಾತಿಯಲ್ಲಿ ಅಧಿಸೂಚಿಸಿರುವ ಟೆಂಡರ್ ಕಂ ಹರಾಜು ದಿನಾಂಕವಾದ **11.12.2026ರ ಬೆಳಿಗ್ಗೆ 11ಕ್ಕೆ** ತೆರೆಯಲಾಗುತ್ತದೆ. ಇದು ಸಾಮಾನ್ಯವಾದ ಅಂದರೆ ಮುಚ್ಚಿದ ಟೆಂಡರ್‌ಗಳ ರೀತಿಯಲ್ಲಿರುತ್ತದೆ. ಈ ಮುಚ್ಚಿದ ಟೆಂಡರ್ ಪ್ರಕ್ರಿಯೆಯು ಮುಗಿಸಿದ ನಂತರ ಸ್ವೀಕರಿಸಲಾದ ಮೊತ್ತಕ್ಕಿಂತ ಹೆಚ್ಚಿಗೆ ಮೊತ್ತವನ್ನು ಯಾವುದೇ ಆಸಕ್ತಿಯುಳ್ಳ ಬಿಡ್‌ದಾರರು ಕೋಟ್ ಮಾಡಲು ಅಪೇಕ್ಷಿಸಿದಾಗ ಅಧಿಕೃತ ಅಧಿಕಾರಿಯು ತಮ್ಮ ವಿವೇಚನಾನುಸಾರ ಅಂತಹ ಬಿಡ್‌ದಾರರೊಳಗೆ ಮುಕ್ತ ಬಿಡ್ ನಡೆಸಬಹುದು, ಇಂತಹ ಮುಕ್ತ ಬಿಡ್‌ನಲ್ಲಿ ಗರಿಷ್ಠ ಬಿಡ್ ಕೂಗುವವರಿಗೆ ಆಸ್ತಿ ಮಾರಾಟವನ್ನು ಸ್ಥಿರಪಡಿಸಬಹುದಾಗಿರುತ್ತದೆ. ಮಾರಾಟವು **ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್** ದೃಢೀಕರಣಕ್ಕೆ ಬದ್ಧವಾಗಿರಬೇಕಾಗುತ್ತದೆ. 7)ಯಶಸ್ವಿ ಬಿಡ್‌ದಾರರು ಮಾರಾಟ ಮೌಲ್ಯದ 25% ರಷ್ಟನ್ನು (ಇಎಂಡಿ ಸೇರಿದಂತೆ) ಅದೇ ದಿನ ಕೂಡಲೇ ಮಾರಾಟ ಮುಗಿದ ನಂತರ ಕೆಲಸದ ದಿನದಿಂದ ಪಾವತಿಸಬೇಕು. ಉಳಿದ 75% ರಷ್ಟನ್ನು ಮಾರಾಟ ದೃಢೀಕರಣ ದಿನಾಂಕದಿಂದ 15 ದಿನಗಳ ಒಳಗೆ ಪಾವತಿಸಬೇಕು, ವಿಫಲರಾದಲ್ಲಿ 25% ರಷ್ಟು ಆರಂಭಿಕ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವದು. ಯಾವುದೇ ಸಂದರ್ಭದಲ್ಲೂ ಮರುಪಾವತಿಸಲಾಗುವುದಿಲ್ಲ, ಯಶಸ್ವಿ ಬಿಡ್‌ದಾರರು ಮೇಲೆ ತಿಳಿಸಿದಂತೆ ಬಿಡ್‌ನ ಒಟ್ಟಾರೆ 25% ಮೊತ್ತವನ್ನು ಪಾವತಿ ಮಾಡಲು ವಿಫಲರಾದಲ್ಲಿ ನಂತರದ ಯಶಸ್ವಿ ಬಿಡ್‌ದಾರರನ್ನು ಮಾರಾಟವನ್ನು ಮುಕ್ತಾಯಗೊಳಿಸುವುದಕ್ಕಾಗಿ ಪರಿಗಣಿಸಲಾಗುವುದು. **8)** ನಿಗದಿತ ಅವಧಿಯೊಳಗಾಗಿ ಹರಾಜು ಮೊತ್ತವನ್ನು ಪೂರ್ಣಪಾವತಿಯಾದ ನಂತರ ಮಾತ್ರವೇ ಯಶಸ್ವಿ ಬಿಡ್‌ದಾರರ ಹೆಸರಿನಲ್ಲಿ ಅಧಿಕೃತ ಅಧಿಕಾರಿಯವರು ಮಾರಾಟ ದೃಢೀಕರಣ ಪತ್ರ ವಿತರಿಸುತ್ತಾರೆ. 9) ಯಶಸ್ವಿ ಬಿಡ್‌ದಾರರೇ, ಕಾನೂನಿನಂತೆ ಅನ್ವಯಿಸುವ ಆಸ್ತಿಗಾಗಿನ ಕನ್ವೆಯನ್ಸಿಗಾಗಿನ ಛಾರ್ಜ್‌ಗಳು/ ಶುಲ್ಕಗಳು, ಮುದ್ರಾಂಕ ಶುಲ್ಕ, ನೋಂದಾವಣಿ ಶುಲ್ಕ ಇತ್ಯಾದಿಗಳನ್ನೆ ಭರಿಸಬೇಕಾಗುತ್ತದೆ. 10) ಯಶಸ್ವಿ ಬಿಡ್‌ದಾರರು ಸ್ಥಾನಿಕ ಬಾಕಿಗಳೇನಾದರೂ ಇದ್ದಲ್ಲಿ (ನ್ಯಾಯ ಬದ್ಧ ಹೌಸ್‌ಟ್ಯಾಕ್ಸ್, ಎಲೆಕ್ಟ್ರಿಸಿಟಿ ಛಾರ್ಜಸ್ ಮತ್ತಿತರ ಬಾಕಿಗಳನ್ನು) ಸರ್ಕಾರಕ್ಕೆ ಯಾವುದೇ ಟಿಡಿಎಸ್, ಜಿಎಸ್‌ಟಿ, ಸರ್ಕಾರಿ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆಗಳೇನಾದರೂ ಬಾಕಿಯಿದ್ದರೆ ಅಂತಹವುಗಳನ್ನು ಪಾವತಿಸಬೇಕಾಗಿರುತ್ತದೆ. 11)ಅಧಿಕೃತ ಅಧಿಕಾರಿಯು ಯಾವುದೇ ಕಾರಣ ನೀಡದೆ ಮತ್ತು ಯಾವುದೇ ಸೂಚನೆ ಕೊಡದೇ ಯಾವುದೇ ಟೆಂಡರ್ ಅಥವಾ ಬಿಡ್ ಅಥವಾ ಎಲ್ಲಾ ಆಫರ್‌ಗಳನ್ನು ಒಪ್ಪಿಕೊಳ್ಳಲು/ತಿರಸ್ಕರಿಸಲು/ಮುಂದೂಡಬಹುದಾದ ಹಾಗೂ ಮಾರಾಟದ ಷರತ್ತು ನಿಬಂಧನೆಗಳ ಮಾರ್ಪಾಡುಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸ್ಥಳ: ಬೆಂಗಳೂರು, ದಿನಾಂಕ: 05-11-2026 ಸಹಿ/ -ಅಧಿಕೃತ ಅಧಿಕಾರಿ, ಮೆ|| ಹೆಚ್‌ಡಿಬಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್

ವಿಧಾನ ಪರಿಷತ್ ಸದಸ್ಯ ರಂಗನಾಥ್‌ಗೆ ಅಭಿನಂದನೆ



ಬಿಜೆಪಿ ಜಯನಗರ ಮಂಡಲ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ಜಯಗಳಿಸಿದ ಎನ್‌ಡಿಎ ಅಭ್ಯರ್ಥಿ ಎ.ಪಿ.ರಂಗನಾಥ್ ಅವರನ್ನು ಅಭಿನಂದಿಸಲಾಯಿತು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಜಯನಗರ ಕ್ಷೇತ್ರದ ಶಾಸಕ ಸಿ.ಕೆ.ರಾಮಮೂರ್ತಿ, ಮಾಜಿ ಮೇಯರ್ ಎಸ್.ಕೆ.ನಟರಾಜ್, ಬಿಬಿಎಂಪಿ ಮಾಜಿ ಸದಸ್ಯೆ ನಾಗರತ್ನ ರಾಮಮೂರ್ತಿ, ಮಂಡಲ ಪ್ರಧಾನ ಕಾರ್ಯದರ್ಶಿ ಮೋಹನ್, ಮಹಿಳಾ ಮೋರ್ಚಾ ಅಧ್ಯಕ್ಷೆ ರಮಾದೇವಿ ಇದ್ದರು.

ಇಂಡಿಪೆಂಡೆಂಟ್ ಪಿಯು ಕಾಲೇಜಲ್ಲಿ ಸಂತೆ ಕಾರ್ಯಕ್ರಮ



ಹೊಸಕೆರೆಹಳ್ಳಿಯ ನರಗುಂದ ಇಂಡಿಪೆಂಡೆಂಟ್ ಪಿ.ಯು. ಕಾಲೇಜಿನಲ್ಲಿ ಶನಿವಾರ ಏರ್ಪಡಿಸಲಾಗಿದ್ದ ಕನ್ನಡ ಸಂತೆ ಕಾರ್ಯಕ್ರಮವನ್ನು ನರಗುಂದ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷೆ ಅಚಲಾ ಎಲ್. ನರಗುಂದ್ ಉದ್ಘಾಟಿಸಿದರು. ಈ ವೇಳೆ ಕಾಲೇಜಿನ ಪ್ರಾಂಶುಪಾಲ ನಳಿನಾ ಇದ್ದರು.

1 ತಿಂಗಳಲ್ಲಿ ಕೆಲಸ ಮಾಡದಿದ್ರೆ ಪಾಲಿಕೆ ಕಚೇರಿಗೆ ಬೀಗ: ಶಾಸಕ ಎಸ್.ಮುನಿರಾಜು

ಸಭೆ ನಡೆಸಿ ಜಿಬಿಎ ಅಧಿಕಾರಿಗಳಿಗೆ ಮುನಿರಾಜು ಎಚ್ಚರಿಕೆ

• **ಕನ್ನಡಪ್ರಭ ವಾರ್ತೆ** ಪೀಣ್ಯ ದಾಸರಹಳ್ಳಿ

ಗ್ರೇಟರ್‌ಬೆಂಗಳೂರು ಪ್ರಾಧಿಕಾರ ಆದ ಮೇಲೆ ಯಾವುದೇ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಕಾಮಗಾರಿಗಳು ಕುಂಠಿತವಾಗಿದೆ. ಒಂದು ತಿಂಗಳ ಒಳಗಾಗಿ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು. ಇಲ್ಲವಾದಲ್ಲಿ ಬಾಗಲಗಂಟೆಯಲ್ಲಿರುವ ಜಿಬಿಎ ಪ್ರಧಾನ ಕಚೇರಿಗೆ ಬೀಗಹಾಕಿ ಪ್ರತಿಭಟನೆ ಮಾಡಲಾಗುತ್ತದೆ ಎಂದು ಶಾಸಕ ಎಸ್.ಮುನಿರಾಜು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಬಾಗಲಗುಂಟೆಯ ಜಿಬಿಎ ಕಛೇರಿಯಲ್ಲಿ ಬೆಂಗಳೂರು ಉತ್ತರ ವಲಯದ ಎಲ್ಲಾ ಅಧಿಕಾರಿಗಳ ಜೊತೆಗೆ ಸಭೆ ಶಾಸಕರು ಮಾತನಾಡಿದರು. 1 ತಿಂಗಳ ಒಳಗೆ ಎಲ್ಲಾ ಅಭಿವೃದ್ಧಿ ಕೆಲಸಗಳಿಗೆ ಚಾಲನೆ ನೀಡಲಾಗುತ್ತದೆ. ಎಲ್ಲಾ ಕಡತಗಳನ್ನು ವಿಲೇವಾರಿ ಮಾಡಲಾಗುತ್ತದೆ. ಬೆಂಗಳೂರಿನ ಬಿಬಿಎಂಪಿ ಇದ್ದಾಗ ಅಭಿವೃದ್ಧಿ ಕೆಲಸಗಳಾಗುತ್ತಿದ್ದವು. ಈಗ ಜಿಬಿಎ ಐದು ಭಾಗ ಮಾಡಿ ದಾಸರಹಳ್ಳಿ ವಿಧಾನಸಭಾ ಕ್ಷೇತ್ರವನ್ನು 2 ವಿಭಾಗಗಳಾಗಿ ಮಾಡಲಾಗಿದೆ. ಇದರಿಂದ ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ದಾಸರಹಳ್ಳಿಯನ್ನು ಅರ್ಧ ಭಾಗವನ್ನು ಉತ್ತರ ವಲಯವನ್ನಾಗಿ ಇನ್ನ ಅರ್ಧ ಭಾಗವನ್ನು ಪಶ್ಚಿಮ ವಲಯವನ್ನಾಗಿ ವಿಭಜಿಸಲಾಗಿದೆ.

ಕಾಮಗಾರಿಗೆ ಸಂಬಂಧಪಟ್ಟ ಕಡತಗಳು ಯಾವುದೂ ಕೂಡ ನಿಧನ ಆಗಬಾರದು. ನಾಗರಿಕರು ಸಮಸ್ಯೆಯನ್ನು ತಗೊಂಡು ಬಂದಾಗ ಅವರಿಗೆ ಸರಿಯಾಗಿ ಉತ್ತರಗಳನ್ನು ಕೊಟ್ಟು ಕೆಲಸವನ್ನು ಮಾಡಬೇಕು ಎಂದು ಅಧಿಕಾರಿಗಳಿಗೆ ಖಡಕ್ ಸೂಚನೆಯನ್ನು ನೀಡಲಾಗಿದೆ. 15 ದಿನಗಳ ಒಳಗೆ ಎಲ್ಲಾ ಕೆಲಸವನ್ನು ಮಾಡಲಾಗುತ್ತದೆ ಎಂದು ಅಧಿಕಾರಿಗಳು ಸೂಚಿಸಿದ್ದಾರೆ. ಅಷ್ಟು ಮಾತು ಅಧಿಕಾರಿಗಳ ಕೆಲಸ ಮಾಡಲಿಲ್ಲ ಅಂದರೆ 20 ದಿನಗಳ ನಂತರ ಮತ್ತೆ ಸಭೆಯನ್ನು ಕರೆದು ಅಭಿವೃದ್ಧಿ ಕೆಲಸಗಳು ಯಾಕೆ ತಡವಾಗುತ್ತದೆ ಎಂದು ಕೇಳುತ್ತೇನೆ ಎಂದು ತಿಳಿಸಿದರು. ಈ ವೇಳೆ ಉತ್ತರ ವಲಯದ ಆಯುಕ್ತ ಸುನೀಲ್ ಕುಮಾರ್, ಜಂಟಿ ಆಯುಕ್ತೆ ಪಲ್ಲವಿ, ಹೆಚ್ಚುವರಿ ಅಭಿವೃದ್ಧಿ ಅಧಿಕಾರಿ ಮೌನ, ಬೆಂಗಳೂರು ಉತ್ತರ ವಲಯದ ಅಧಿಕಾರಿಗಳು ಇದ್ದರು.

